ಎಂಬ ಮಹಿಳೆಯನ್ನು ಪರಿಚಯಿಸಿದರು. ಅವಳಿಗೆ ಸುಮಾರಾಗಿ ನನ್ನಷ್ಟೇ ವಯಸ್ಸಾಗಿತ್ತು. ನಗುಮೊಗದ, ಸುಂದರವಾಗಿದ್ದ ಅವಳು ವಾಕ್ ಚತುರೆಯಾಗಿದ್ದಳು. ಅವಳು ನನ್ನನ್ನು ನೋಡುತ್ತಾ ಹೇಳಿದಳು, ಸದಾನಂದರು ನಿಮ್ಮ ಬಗ್ಗೆ ಹೇಳಿದ್ದರು. ನಾನು ಕೃಷಿ ಇಲಾಖೆಯಲ್ಲಿ ಕೆಲಸ ಮಾಡ್ತಿದ್ದೀನಿ. ಒಬ್ಬಳು ಮಗಳಿದ್ದಾಳೆ. ಅವಳ ಮದುವೆಯನ್ನು ಕಳೆದ ವರ್ಷ ಮಾಡಿದೆ. ನಿಮ್ಮ ಹಾಗೆ ನಾನೂ ಸ್ವತಂತ್ರಳು. ಯಾವ ಜವಾಬ್ದಾರಿ ಇಲ್ಲ. ಮೂರು ತಿಂಗಳ ಮೊದಲೇ ನಿಮ್ಮ ಪರಿಚಯವಾಗಿದ್ದರೆ ಚೆಂದವಿತ್ತು. ಈ ಸದಾನಂದನ ಕೆಲಸಗಳೇ ಹೀಗೆ. ಯಾರಿಗೆ ಯಾರು ಬೇಕೋ ಅವರನ್ನು ಬೇರೆಯವರಿಗೆ ಕಟ್ಟಿಬಿಡ್ತಾನೆ. ನನ್ನ ದುರದೃಷ್ಟ, ಮೂರು ತಿಂಗಳ ಹಿಂದೆಯಷ್ಟೇ ನನಗೆ ಮದುವೆಯಾಯ್ತು. ನನಗೆ ಉಂಡಾಡಿ ಗಂಡ ಸಿಕ್ಕಿದ್ದಾನೆ. ನನಗೆ ಸತಾಯಿಸುತ್ತಿರುತ್ತಾನೆ. ತನ್ನ ಒಂದು ನಯಾ ಪೈಸೆಯನ್ನೂ ಬಿಚ್ಚಲ್ಲ. ಆದ್ರೆ ನನ್ನ ಸಂಬಳದ ಖರ್ಚು ವೆಚ್ಚ ಕೇಳ್ತಾನೆ. ಅಲ್ಲದೆ, ನಾನು ಯಾರ ಜೊತೆಗೆ ಮಾತನಾಡಿದರೂ ನನ್ನ ಬಗ್ಗೆ ಅನುಮಾನ ಪಡ್ತಾನೆ. ಈಗ ಎಲ್ಲೋ ಬಾಲ ಮುದುರಿಕೊಂಡು ನಮ್ಮನ್ನೇ ವಾಚ್ ಮಾಡ್ತಿರಬೇಕು. ಅವನು ಯಾವಾಗ ಸಾಯ್ತಾನೋ, ಏನೋ...! ಆಗಲೇ ಯಾರೋ ಅವಳನ್ನು ಕರೆದಿದ್ದರಿಂದ ಅವಳು ಹೊರಟು ಹೋದಳು, ಮತ್ತೆ ಕಾಣಲಿಲ್ಲ.

ಎರಡು ವಾರಗಳ ನಂತರ ವರಲಕ್ಷ್ಮಿ ಫೋನ್ ಮಾಡಿ ಹೇಳಿದಳು, 'ನಿಮ್ಮ ನಂಬರನ್ನು ಸದಾನಂದ ಕೊಟ್ಟಿದ್ದಾನೆ. ನಾನು ನಿಮ್ಮ ಹತ್ರ ಮಾತನಾಡಬಹುದೇ?'

'ಮಾತಾಡಿ!' ಎಂದೆ.

'ನೀವು ಫ್ರೀ ಇದ್ದೀರಲ್ವ?'

'ಇದ್ದೀನಿ, ಹೇಳಿ'

'ನಾನು ನಿಜವನ್ನೇ ಹೇಳ್ತಿದ್ದೀನಿ. ನನಗೆ ನಲವತ್ತೇಳು ವರ್ಷ. ವಯಸ್ಸು ಕಡಿಮೆ ಹೇಳೋದು ನನಗಿಷ್ಟವಿಲ್ಲ. ಐ.ಎಮ್.ಐ.ಯಲ್ಲಿ ಸಿವಿಲಿಯನ್ ಹುದ್ದೆಯಲ್ಲಿ ನೌಕರಿ ಮಾಡ್ತಿದ್ದೀನಿ.'

'ಎಲ್ಲಿ?'

'ನಾನಿರೋದು ಚಂದಾ ನಗರದಲ್ಲಿ, ಕೆಲಸ ಮಾಡೋದು ಸಿಕಂದರಾಬಾದಿನಲ್ಲಿ. ನಾನು ನನ್ನ ಅಣ್ಣನ ಮನೇಲಿದ್ದೇನೆ. ಇನ್ನೊಂದು ಗಂಟೆಯೊಳಗೆ ನಿಮ್ಮನ್ನು ಭೇಟಿಯಾಗಬಹುದೇ?'

'ಅಷ್ಟು ಅರ್ಜೆಂಟಿದೆಯಾ?'

'ಹಾಗೇ...ನಾನೀಗ ಆಫೀಸಿನಲ್ಲಿದ್ದೇನೆ. ಸಂಜೆ ಐದು ಗಂಟೆಯ ನಂತರ ಭೇಟಿಯಾಗೋಣ? ನೀವು ಕಾರಿನಲ್ಲಿ ಕುಕುಟಪಲ್ಲಿಯಿಂದ ಜೆ.ಎನ್.ಟಿ.ಯೂ. ಹಾದು ಹೋಗ್ತೀರಲ್ವ? ನಾನು ಜೆ.ಎನ್.ಟಿ.ಯೂ. ಎದುರಿನ ಬಸ್ ಸ್ಟಾಪ್‌ನಲ್ಲಿ ನಿಂತಿರ್ತೀನಿ. ನೀವು ನನ್ನನ್ನು ಪಿಕ್‌ಅಪ್ ಮಾಡಿಕೊಂಡರೆ ನಾನು ಕಾರಿನಲ್ಲಿಯೇ ನನ್ನ ಬಗ್ಗೆ ಎಲ್ಲಾ ಹೇಳ್ತೀನಿ'.

'ನಾನು ನಿಮ್ಮನ್ನು ಗುರುತಿಸೋದು ಹೇಗೆ?'

'ನಾನು ತೆಳು ಹಳದಿ ಬಣ್ಣದ ಸೀರೆ ಉಟ್ಕೊಂಡು ಬರ್ತೀನಿ...ನಾನು ಒಂದು ವಿಷಯ ಕೇಳಬಾರದು, ಆದ್ರೆ ಕೇಳದೇ ಇರೋದಕ್ಕೂ ಸಾಧ್ಯವಾಗ್ತಿಲ್ಲ...'

'ಕೇಳಿ.'

'ಏನಿಲ್ಲ...ನೀವು ಕುಟುಂಬ ಯೋಜನೆ ಆಪರೇಶನ್ ಮಾಡಿಸಿಕೊಂಡಿದ್ದೀರ?'

'ಇಲ್ಲ'

'ನಿಮ್ಮ ಹತ್ರ ಮೂರ್ನಾಲ್ಕು ಮನೆಗಳಿವೆ ಅಂತ ಸದಾನಂದ ಹೇಳಿದ. ಆಸ್ತಿ ಹಂಚಿಕೆಯಾಗಿದೆಯಾ?'

'ಇನ್ನೂ ಆಗಿಲ್ಲ.'

'ನಾನೊಂದು ಸಲಹೆ ಕೊಟ್ಟರೆ, ಅದನ್ನು ತಪ್ಪಾಗಿ ತಿಳಿಯಲ್ಲ ತಾನೇ?'

'ಇಲ್ಲ, ತಿಳಿಯಲ್ಲ'

'ಆಸ್ತಿಯನ್ನು ನಾಲ್ಕು ಹಿಸ್ಸೆ ಮಾಡಬೇಕು. ನಿಮ್ಮ ಮಕ್ಕಳಿಗೆ ಒಂದೊಂದು ಭಾಗ. ನಿಮಗೊಂದು ಭಾಗ. ನೀವು ಯಾರನ್ನು ಮದುವೆಯಾಗ್ತೀರೋ, ಅವರಿಗೊಂದು ಭಾಗ ಕೊಡಬೇಕು. ಒಂದು ವೇಳೆ ಎಲ್ಲಾ ಅನುಕೂಲವಾಗಿ ಆದರೆ ಆ ನಾಲ್ಕನೇ ವ್ಯಕ್ತಿ ನಾನೇ ಆಗಬಹುದು...ನೀವು ಬರುವಾಗ ನನಗೊಂದು ಸಣ್ಣ ಸಹಾಯ ಮಾಡ್ತೀರ?'

'ಹೇಳಿ'.

'ನಮ್ಮ ಪರಿಚಯ ಇನ್ನೂ ಸರಿಯಾಗಿ ಆಗಿಲ್ಲ, ಆದ್ರೂ ನಿಮ್ಮ ಹತ್ರ ಕೇಳಲು ಸಂಕೋಚವಾಗ್ತಿದೆ. ದಯವಿಟ್ಟು ತಪ್ಪು ತಿಳೀಬೇಡಿ. ನನಗೆ ಅರ್ಜೆಂಟ್ ಇಪ್ಪತ್ತೈದು ಸಾವಿರ ಬೇಕಾಗಿದೆ.'

'ನಾನು ಕೈಯಲ್ಲಿ ಅಷ್ಟು ಹಣ ಇಟ್ಕೊಳ್ಳಲ್ಲ'

'ನಿಮ್ಮ ಹತ್ರ ಎ.ಟಿ.ಎಮ್. ಕಾರ್ಡ್ ಇರಲೇ ಬೇಕು. ಅದರಿಂದ ತೆಗೆದು ಕೊಡ್ತೀರ? ಸಾಲ ಅಂತಲೇ ತಿಳೀರಿ. ಮುಂದಿನ ದಿನಾಂಕವನ್ನು ಬರೆದು ನಾನು ಚೆಕ್ ಕೊಡ್ತೀನಿ. ನನ್ನ ಸೆಲ್‌ನಲ್ಲಿ ಹೆಚ್ಚು ನಿಮಿಷಗಳಿಲ್ಲ. ನಿಮ್ಮ ಕಾರ್ ಬಣ್ಣ ಎಂಥದ್ದು? ನಂಬರ್ ಏನು?'

ನಾನು ಬಣ್ಣ, ನಂಬರ್ ಹೇಳಿದೆ.

'ನಾನು ಸರಿಯಾಗಿ ಐದೂಕಾಲಿಗೆ ಅಲ್ಲಿಗೆ ಬರ್ತೀನಿ, ಮುಕ್ಕಾಲು ಗಂಟೆ ಲೇಟಾದರೂ ನೀವು ಕಾಯುತ್ತಿರಿ. ಯಾಕೆಂದರೆ ನಾನು ಬಸ್ಸಿನಲ್ಲಿ ಬರೋದು.'

ಐದೂವರೆಗೆ ಬಸ್ ಸ್ಟಾಪ್ ಬಳಿ ಬಂದು, ಕಾರನ್ನು ಬದಿಗೆ ನಿಲ್ಲಿಸಿ ಅವಳಿಗಾಗಿ ಕಾಯುತ್ತಾ ನಿಂತೆ. ಅವಳು ಬರಲಿಲ್ಲ. ಫೋನ್ ಸಹ ಮಾಡಲಿಲ್ಲ. ಮರುದಿನವೂ ಅಥವಾ ಆ ನಂತರದ ದಿನಗಳಲ್ಲಿಯೂ ಅವಳ ಫೋನ್ ಬರಲಿಲ್ಲ.

ವರಲಕ್ಷ್ಮಿಯ ನಂತರ ನನಗೆ ಇನ್ನೂ ಮೂವರ ಫೋನ್ ಬಂತು. ನನಗೆ ನನ್ನ ಮೇಲೇ ಸಿಟ್ಟು ಬಂತು. ಈಗ ನನಗೆ ನನ್ನ ಕೆಲಸವೇ ಹಿಡಿಸುತ್ತಿರಲಿಲ್ಲ. ಈ ವಯಸ್ಸಿನಲ್ಲಿ ನನ್ನನ್ನು ಮದುವೆಯಾಗುವಂಥ ಮಹಿಳೆಯರಿಗೆ ರಕ್ಷಣೆ ಬೇಕು ಎಂಬುದು ತಪ್ಪಲ್ಲ. ಆದರೆ ನನ್ನನ್ನು ಮರೆಮಾಚಿಕೊಂಡು ಇನ್ನೊಬ್ಬರಿಗೆ ಸ್ಪಷ್ಟವಾಗಿ ಹೇಳದೇ ಇರುವುದು ನನಗೆ ಸರಿಯೆನಿಸಲಿಲ್ಲ. ಇದನ್ನು ತಿಳಿದುಕೊಳ್ಳುವುದಕ್ಕೆ ಮೊದಲೇ ನನ್ನ ನೆರಳು ನನ್ನಿಂದ ತುಂಬಾ ದೂರಕ್ಕೆ ಹೋಗಿದೆ.

ತಪ್ಪು ಸದಾನಂದನದ್ದಲ್ಲ, ತಪ್ಪು ನನ್ನದೇ. ನನ್ನ ಜವಾಬ್ದಾರಿ ಇದರಲ್ಲಿ ತುಂಬಾ ಇದೆ. ಕಡೆಗೆ ಒಂದು ದಿನ ಸದಾನಂದ ನಲ್ಲೂರಿನಿಂದ ಫೋನ್ ಮಾಡಿದ.

'ನೋಡು, ನಿನಗೆ ಭಾರತಿಯ ಪರಿಚಯ ಮಾಡಿಸ್ತಿದ್ದೀನಿ. ಅವಳು ನೂರಕ್ಕೆ ನೂರರಷ್ಟು ಸರಿಯಾಗ್ತಾಳೆ. ಈ ಮಧ್ಯೆ ನೀನು ಒಂದು ಮದುವೆಗೆ ನಲ್ಲೂರಿಗೆ ಬಂದಿದ್ದೆ, ಆಗ ಅವಳು ನಿನ್ನನ್ನು ನೋಡಿದ್ದಾಳೆ. ಇಲ್ಲಿ ಅವಳ ಮನೆಯಿದೆ. ಗಂಡ ಏರ್‌ಫೋರ್ಸ್‌ನಲ್ಲಿ ಕೆಲಸ ಮಾಡ್ತಿದ್ದ, ಈಗ್ಗೆ ಐದು ವರ್ಷಗಳ ಹಿಂದೆ ಸತ್ತು ಹೋದ. ಭಾರತಿಯ ವಯಸ್ಸು ನಲವತ್ತೈದು, ಸ್ವಲ್ಪ ಕಂದು ಬಣ್ಣ. ಮಕ್ಕಳಿಲ್ಲ. ಅವಳಿಗೆ ಫೋನ್ ಕೊಡ್ತೀನಿ, ಮಾತಾಡು.'

'ನಮಸ್ಕಾರ!' ಅತ್ತ ಕಡೆಯಿಂದ ಭಾರತಿಯ ಧ್ವನಿ ಕೇಳಿಸಿತು.

ನಾನೂ ನಮಸ್ಕಾರ ಅಂದೆ.

'ಸದಾನಂದರು ಹೇಳುವುದಕ್ಕೂ ಮೊದಲೇ ನನಗೆ ನೀವು ಗೊತ್ತು.'

ಅವಳೊಂದಿಗೆ ಏನು ಮಾತನಾಡಬೇಕೆಂದು ತೋಚುತ್ತಿರಲಿಲ್ಲ. ನಾನು ಸದಾನಂದನಿಗೆ, ಇನ್ನು ಸಂಬಂಧ ಕಳಿಸಬೇಡ ಎಂದಿದ್ದೆ. ಆದರೆ ಅವನು ಕೇಳುತ್ತಿಲ್ಲ.

'ನನಗೆ ಪೆನ್ಶನ್ ಸಿಗುತ್ತೆ' ಭಾರತಿಯೇ ಹೇಳಿದಳು.

ಎಷ್ಟು ಪೆನ್ಶನ್ ಬರುತ್ತೆ ಅಂತ ನಾನು ಕೇಳಲಿಲ್ಲ, ಆದರೆ ಅವಳೇ ಹೇಳಿದಳು.

'ನಿಮ್ಮ ಪತಿ ಹೇಗೆ ಸತ್ತರು?' ನಾನು ಕೇಳಿದೆ.

'ಎದೆ ನೋಯ್ತಿತ್ತು, ಸರ್ಜರಿಯೂ ಆಗಿತ್ತು, ಆದರೂ ಉಳಿಯಲಿಲ್ಲ.'

'ಸಾರಿ!...ನಿಮ್ಮದು ಫ್ಯಾಮಿಲಿ ಪೆನ್ಶನ್ ಅಲ್ವಾ? ನೀವು ಯಾರನ್ನು ಮದುವೆಯಾದರೂ ನಿಮಗೆ ಬರುವ ಪೆನ್ಶನ್ ನಿಂತು ಹೋಗುತ್ತೆ. ನನಗೆ ಪೆನ್ಶನ್ ಬರಲ್ಲ, ನನ್ನ ನೌಕರಿ ಅಂಥದ್ದು. ನನ್ನ ಬಗ್ಗೆ ಒಂದು ನಿಜ ಸಂಗತಿಯನ್ನು ಹೇಳ್ತೀನಿ, ಕೇಳಿ. ನಾನೀಗ ಆಸ್ಪತ್ರೆಯಿಂದ ಮಾತನಾಡ್ತಿದ್ದೀನಿ, ಇಲ್ಲಿಯ ಹಾಸಿಗೆ ಮೇಲೆ ಕೂತು ಮಾತನಾಡ್ತಿದ್ದೀನಿ. ನಾಳೆ ನನಗೆ ಹಾರ್ಟ್ ಆಪರೇಶನ್ ಇದೆ. ಆಪರೇಶನ್ ಆದ ಮೇಲೆ ನಾನು ಬದುಕಿರ್ತೀನೋ, ಇಲ್ವೋ ಗೊತ್ತಿಲ್ಲ. ನನ್ನಿಂದಾಗಿ ನೀವು ಎರಡನೆ ಬಾರಿಗೆ ವಿಧವೆಯಾಗಬೇಡಿ...'

ನಾನಿನ್ನೂ ನನ್ನ ಮಾತನ್ನು ಪೂರ್ಣ ಹೇಳಿರಲಿಲ್ಲ, ಭಾರತಿ ಬಿಕ್ಕಳಿಸಿ ಅಳುತ್ತಿರುವುದು ಕೇಳಿಸಿತು.

■

